**ಎಫ್.ಡಿ.ಪಿ.ನಂ:03/2015**
**ಪಿ.ಡಬ್ಲ್ಯೂ: 01**

**ದಿನಾಂಕ: 13-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ.ಎಸ್.ಜೆ., ಎದುರುದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಿ:18-08-2018 ರಂದು 8 ಮತ್ತು 9ನೇ ಎದುರುದಾರರು ಅವಶ್ಯಕ ಪಕ್ಷಗಾರರೆಂದು ಪ್ರಕರಣಕ್ಕೆ ಸೇರಲು ಅರ್ಜಿಯನ್ನು ಹಾಕಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯನ್ನು ನ್ಯಾಯಾಲಯವು ಪುರಸ್ಕರಿಸಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಪಾಲಯ್ಯ ಅಲಿಯಾಸ್ ಚಿನ್ನ ಪಾಲಯ್ಯ ಎಂದರೆ ಸರಿ. ನನ್ನ ತಾತನ ಹೆಸರು ಅಪ್ಪಣ್ಣ. ನನ್ನ ತಾತ ಅಪ್ಪಣ್ಣನಿಗೆ 8 ಜನ ಮಕ್ಕಳು. 1) ಶಿವಮೂರ್ತಿ, 2) ಪಾಲಯ್ಯ ಅಂದರೆ ನನ್ನ ತಂದೆ, 3) ಲಕ್ಷ್ಮೀದೇವಿ, 4) ತಮ್ಮಯ್ಯ, 5) ರಾಜಣ್ಣ, 6) ಕುಬೇಂದ್ರ, 7) ಪಾಪಣ್ಣ ಮತ್ತು 8) ಸುಜಾತಾ. ಈ ಪ್ರಕರಣದ ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಅಪ್ಪಣ್ಣನ 8 ಜನ ಮಕ್ಕಳಿಗೂ ಸಮಪಾಲು ಇರುತ್ತದೆ ಎಂದರೆ ಸರಿ. ನನ್ನ ತಂದೆಗೆ ಬಂದ ಭಾಗದಲ್ಲಿ ಮಾತ್ರ ನನಗೆ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿ.

**(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.